## ನಿಮ್ಮೊಡನೆ

# ಗರ್ಭಪಾತದ ಹಕ್ಕಿಗೆ ಸುಪ್ರೀಂ ಮೊಹರು ಮಹಿಳೆಯರ ಆರೋಗ್ಯ-ಘನತೆಗೆ ಒತ್ತು

> **ಅಸುರಕ್ಷಿತ ಗರ್ಭಪಾತಗಳಿಂದ ಪ್ರತಿ ವರ್ಷ ಸಾವಿರಾರು ಸಾವುಗಳು ಭಾರತದಲ್ಲಿ ವರದಿಯಾಗುತ್ತಿವೆ. ಅಂಕಿಅಂಶಗಳ ಪ್ರಕಾರ, ಪ್ರತಿ ಎರಡು ಗಂಟೆಗೆ ಕನಿಷ್ಠ ಓರ್ವ ಮಹಿಳೆ ಅಸುರಕ್ಷಿತ ಗರ್ಭಪಾತದಿಂದ ಸಾವಿಗೀಡಾಗುತ್ತಿದ್ದಾಳೆ.**

ಗರ್ಭಪಾತದ ಹಕ್ಕಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಹೆಣ್ಣುಮಕ್ಕಳ ಆರೋಗ್ಯದ ದೃಷ್ಟಿಯಿಂದ ಮಾತ್ರವಲ್ಲದೆ, ಮಹಿಳಾ ಹಕ್ಕುಗಳ ಸಂರಕ್ಷಣೆಗೆ ಸಂಬಂಧಿಸಿದಂತೆಯೂ ಮಹತ್ವ ಪಡೆದಿದೆ. ಸುಪ್ರೀಂ ಕೋರ್ಟ್ ಆದೇಶದಲ್ಲಿ ಎರಡು ಗಮನಾರ್ಹ ಸಂಗತಿಗಳಿವೆ. ಗರ್ಭ ಮತ್ತು ಗರ್ಭಧಾರಣೆಗೆ ಸಂಬಂಧಿಸಿದ ನಿರ್ಣಯಗಳನ್ನು ತೆಗೆದುಕೊಳ್ಳುವ ಮಹಿಳೆಯರ ಹಕ್ಕನ್ನು ಸ್ಪಷ್ಟಪಡಿಸಿರುವುದು ಹಾಗೂ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ನೀಡಿರುವ ವ್ಯಾಖ್ಯಾನ ಆ ಎರಡು ಸಂಗತಿಗಳು. ಅವಿವಾಹಿತ ಮಹಿಳೆಯರು ಸೇರಿದಂತೆ ಎಲ್ಲ ಮಹಿಳೆಯರೂ ಭ್ರೂಣಕ್ಕೆ 24 ವಾರಗಳು ತುಂಬುವವರೆಗೆ ಗರ್ಭಪಾತ ಮಾಡಿಸಿಕೊಳ್ಳುವ ಹಕ್ಕು ಹೊಂದಿದ್ದಾರೆ ಎಂದು ನ್ಯಾಯಪೀಠ ಹೇಳಿದೆ. ಗರ್ಭಪಾತಕ್ಕೆ ಸಂಬಂಧಿಸಿದಂತೆ ಹೆಂಡತಿಯ ಸಮ್ಮತಿ ಇಲ್ಲದೆ ನಡೆಯುವ ಲೈಂಗಿಕ ಸಂಪರ್ಕವನ್ನು ಅತ್ಯಾಚಾರವೆಂದು ಪರಿಗಣಿಸಬಹುದು ಎಂದೂ ವಿಶ್ಲೇಷಿಸಿದೆ.

ಲೈಂಗಿಕ ದೌರ್ಜನ್ಯ ಮತ್ತು ಹೆಣ್ಣಿನ ಗರ್ಭಧಾರಣೆಗೆ ಸಂಬಂಧಿಸಿದಂತೆ ಸಮಾಜದಲ್ಲಿರುವ ಪೂರ್ವಗ್ರಹಗಳು ತಿಳಿಗೊಳ್ಳುವ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ಆದೇಶಕ್ಕೆ ವಿಶೇಷ ಮಹತ್ವವಿದೆ. ಗರ್ಭಪಾತಕ್ಕೆ ಸಂಬಂಧಿಸಿದಂತೆ ವಿವಾಹಿತ ಮಹಿಳೆಗೆ ಇರುವ ಹಕ್ಕುಗಳು ಅವಿವಾಹಿತ ಮಹಿಳೆಗೂ ಇರುತ್ತವೆ ಹಾಗೂ ಮಗುವನ್ನು ಹೊಂದುವ ಕುರಿತಂತೆ ನಿರ್ಧರಿಸುವ ಸ್ವಾತಂತ್ರ್ಯ ಮಹಿಳೆಗೂ ಇರುತ್ತದೆ ಎನ್ನುವುದು ಹೆಣ್ಣಿನ ಆರೋಗ್ಯದ ಹಕ್ಕನ್ನು ಎತ್ತಿಹಿಡಿಯುವುದರ ಜೊತೆಗೆ ಆತ್ಮಘನತೆಗೂ ಪೂರಕವಾದುದು. ಹೆಣ್ಣಿನ ಮೇಲೆ ಲೈಂಗಿಕ ದೌರ್ಜನ್ಯ ಅಥವಾ ಅತ್ಯಾಚಾರ ಹೆಚ್ಚಾಗಿ ಹೊರಗಿನವರಿಂದ ನಡೆಯುತ್ತದೆ ಎನ್ನುವುದೊಂದು ಸಾಮಾನ್ಯ ಗ್ರಹಿಕೆ. ಇಂಥ ಮನಸ್ಥಿತಿಯ ಬಗ್ಗೆ ವಿಷಾದ ವ್ಯಕ್ತಪಡಿಸಿರುವ ನ್ಯಾಯಪೀಠ – ಸಂಗಾತಿಯಿಂದಲೇ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುವ ಹಾಗೂ ಅದು ಅತ್ಯಾಚಾರದ ರೂಪ ಪಡೆಯುವ ಸಾಧ್ಯತೆ ಇರುವುದನ್ನೂ ಗುರ್ತಿಸಿದೆ.

ಗರ್ಭಪಾತಕ್ಕೆ ಸಂಬಂಧಿಸಿದಂತೆ ಸಮಾಜದಲ್ಲಿರುವ ಕಾನೂನು ತಿಳಿವಳಿಕೆಯ ಕೊರತೆ, ಸುಪ್ರೀಂ ಕೋರ್ಟ್ ತೀರ್ಪಿನಿಂದಾಗಿ ಸ್ವಲ್ಪವಾದರೂ ಕಡಿಮೆಯಾಗುತ್ತದೆಂದು ನಿರೀಕ್ಷಿಸಬಹುದು. ಕನಿಷ್ಠ ವಿದ್ಯಾವಂತ ಮಹಿಳೆಯರಾದರೂ ಗರ್ಭಧಾರಣೆಗೆ ಸಂಬಂಧಿಸಿದಂತೆ ತಮಗಿರುವ ಹಕ್ಕುಗಳನ್ನು ತಿಳಿದುಕೊಂಡರೆ ಪರಿಸ್ಥಿತಿಯಲ್ಲಿ ಸಾಕಷ್ಟು ಸುಧಾರಣೆಯಾಗುತ್ತದೆ. ಗರ್ಭಪಾತಕ್ಕೆ ಸಂಬಂಧಿಸಿದಂತೆ ಸಮಾಜದ ಗ್ರಹಿಕೆಗಳು ಮುಕ್ತವಾಗಿಲ್ಲ. ಗರ್ಭಪಾತದ ಬಗ್ಗೆ ಪಾಪಪ್ರಜ್ಞೆ, ಹಿಂಜರಿಕೆ ಅನೇಕರನ್ನು ಕಾಡುತ್ತದೆ. ಅವಿವಾಹಿತ ಹೆಣ್ಣುಮಕ್ಕಳು ಗರ್ಭ ಧರಿಸಿದಾಗ ಸಮಾಜ ಅವರನ್ನು ಕಡೆಗಣ್ಣಿನಿಂದ ಕಾಣುತ್ತದೆ. ಅತ್ಯಾಚಾರ ಸಂದರ್ಭಗಳಲ್ಲಿನ ಗರ್ಭಧಾರಣೆ ಯಾತನೆಯ ಘಟನೆಯನ್ನು ಮತ್ತೆ ಮತ್ತೆ ಮರುಕಳಿಸುವಂತೆ ಮಾಡುತ್ತದೆ. ಇಂಥ ಸಂದರ್ಭಗಳಲ್ಲಿ ಹೆಣ್ಣುಮಕ್ಕಳಿಗೆ ಕಾನೂನಿನ ಸಂರಕ್ಷಣೆ ದೊರೆಯಲು ಸುಪ್ರೀಂ ಕೋರ್ಟ್‌ನ ಪ್ರಸಕ್ತ ತೀರ್ಪು ಒತ್ತಾಸೆಯಂತಿದೆ.

ಭಾರತದಲ್ಲಿ ಪ್ರತಿ ವರ್ಷ ಸುಮಾರು 65 ಲಕ್ಷ ಹೆಣ್ಣುಮಕ್ಕಳು ಬೇಡದ ಗರ್ಭವನ್ನು ತೆಗೆಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಅಸುರಕ್ಷಿತ ಗರ್ಭಪಾತಕ್ಕೆ ತಮ್ಮನ್ನೊಡ್ಡಿಕೊಳ್ಳುವವರು ನೋವು ಅನುಭವಿಸುತ್ತಾರೆ. ಕೆಲವೊಮ್ಮೆ ಆ ನೋವು ಸಾವಿನಲ್ಲೂ ಕೊನೆಗೊಳ್ಳುತ್ತದೆ. ಗರ್ಭಪಾತದ ಔಷಧಿಗಳು ವೈದ್ಯರ ಚೀಟಿಯಿಲ್ಲದೆ ಕೆಲವು ಔಷಧಿ ಅಂಗಡಿಗಳಲ್ಲಿ ದೊರೆಯುವುದು, ಅಸುರಕ್ಷಿತ ಗರ್ಭಪಾತಕ್ಕೆ ಒಂದು ಉದಾಹರಣೆಯಷ್ಟೇ. ಪರಿಣತಿಯ ಕೊರತೆ ಹೊಂದಿರುವ ವೈದ್ಯಕೀಯ ಸಿಬ್ಬಂದಿ ಮಾಡುವ ಅಸುರಕ್ಷಿತ ಗರ್ಭಪಾತಗಳಿಂದ ಪ್ರತಿ ವರ್ಷ ಸಾವಿರಾರು ಸಾವುಗಳು ಭಾರತದಲ್ಲಿ ವರದಿಯಾಗುತ್ತಿವೆ. ಅಂಕಿಅಂಶಗಳ ಪ್ರಕಾರ, ಪ್ರತಿ ಎರಡು ಗಂಟೆಗೆ ಕನಿಷ್ಠ ಓರ್ವ ಮಹಿಳೆ ಅಸುರಕ್ಷಿತ ಗರ್ಭಪಾತದಿಂದ ಸಾವಿಗೀಡಾಗುತ್ತಿದ್ದಾಳೆ.

ನಗರ ಪ್ರದೇಶಗಳಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿ ಹಣ ತೆತ್ತು ಸುರಕ್ಷಿತ ವೈದ್ಯಕೀಯ ಸೇವೆ ಪಡೆಯುವ ಸಾಧ್ಯತೆಯಾದರೂ ಇದೆ. ಆದರೆ, ಮೂಲಭೂತ ಸೌಕರ್ಯಗಳ ಕೊರತೆಯಿಂದ ಬಳಲುವ ಗ್ರಾಮೀಣ ಪ್ರದೇಶಗಳಲ್ಲಿ ತಜ್ಞ ವೈದ್ಯಕೀಯ ಸೇವೆಯನ್ನು ನಿರೀಕ್ಷಿಸುವುದೇ ಅಸಹಜ ಎನ್ನುವ ಪರಿಸ್ಥಿತಿ ದೇಶದ ಹಲವು ಭಾಗಗಳಲ್ಲಿದೆ. ಗರ್ಭಪಾತಕ್ಕಾಗಿ ಮಹಿಳೆಯರು ದೂರ ಪ್ರಯಾಣ ಕೈಗೊಳ್ಳಬೇಕಾಗುತ್ತದೆ. ಈ ಪ್ರಕ್ರಿಯೆ ಹೆಚ್ಚಿನ ಹಣದೊಂದಿಗೆ ದೈಹಿಕ ಹಾಗೂ ಮಾನಸಿಕ ಶ್ರಮಕ್ಕೆ ಕಾರಣವಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಹಿಳಾಸ್ನೇಹಿಯಾಗಿ ರೂಪಿಸುವ ನಿಟ್ಟಿನಲ್ಲಿ ಸರ್ಕಾರ ಹೆಚ್ಚಿನ ಆಸ್ಥೆ ವಹಿಸಬೇಕು.

ಸುಪ್ರೀಂ ಕೋರ್ಟ್ ತೀರ್ಪಿನ ಪ್ರೇರಣೆಯಿಂದ ಗರ್ಭಪಾತಕ್ಕೆ ಸಂಬಂಧಿಸಿದಂತೆ ಮಹಿಳೆಯರಿಗೆ ಇರುವ ಹಕ್ಕುಗಳ ಕುರಿತು ಜಾಗೃತಿ ಮೂಡಿಸುವ ಕೆಲಸ ವ್ಯಾಪಕವಾಗಿ ನಡೆಯಬೇಕಾಗಿದೆ. ಇದರಿಂದಾಗಿ, ಗರ್ಭಪಾತಕ್ಕೆ ಕಾನೂನಿನ ಮಾನ್ಯತೆ ತಂದುಕೊಡುವುದರ ಜೊತೆಗೆ ಅಸುರಕ್ಷಿತ ಗರ್ಭಪಾತಗಳ ದಂಧೆಗೆ ಕಡಿವಾಣ ಹಾಕುವುದಕ್ಕೆ ಸುಪ್ರೀಂ ಕೋರ್ಟ್ ತೀರ್ಪು ಪ್ರೇರಣೆ ಆಗಬೇಕಿದೆ.



ಈಶ್ವರ್

**■ ರಘುನಾಥ ಚ.ಹ.**